ನನ್ನ ಓದು

# ರಕ್ತ-ಮಾಂಸಗಳ, ಬದ್ಧ ಬೌದ್ಧಿಕತೆಯ ಮಹಾಪಥಿಕನ ಮಾನವೀಯ ಕಥನ



**ಎಂ.ಎಸ್. ಆಶಾದೇವಿ**

ಮತ್ತೆ ಮಹಾ ಕಾದಂಬರಿಗಳ ಕಾಲ ಆರಂಭವಾದಂತಿದೆ. ಮಾತ್ರವಲ್ಲ, ಮಹಾಪ್ರಯಾಣಗಳ ಕಡೆಗೆ ಮರು ಪ್ರಯಾಣವೂ ಶುರುವಾದಂತಿದೆ. ಕಸ್ತೂರ್ ಬಾ, ಗಾಂಧಿ, ಅಕ್ಕ, ಅಲ್ಲಮ, ಅಂಬೇಡ್ಕರ್ ಎಲ್ಲರನ್ನೂ ಮರು ಭೇಟಿಯಾಗುವ ಮಹಾಪರ್ವವೂ ಆರಂಭವಾಗಿದೆ. ಲೇಖಕ ಲೇಖಕಿಯರು ಯೋಜನೆಯೊಂದನ್ನು ಹಾಕಿಕೊಂಡೇನೂ ಇದನ್ನು ಶುರು ಮಾಡಿಲ್ಲ. ಹಾಗಿದ್ದರೆ ಇದನ್ನು ಕಾಲಧರ್ಮವೆಂದು ಕರೆಯಬಹುದೆ? ಎಲ್ಲ ಕ್ರಾಂತಿಗಳ ಆರಂಭದ ಮುಂಚೆಯೂ ಈ ಬಗೆಯ 'ಸ್ಥಳ ಅಧ್ಯಯನ'ವೊಂದು ನಡೆದೇ ನಡೆದಿರುತ್ತದೆ ಎಂದು ನಾವು ತಿಳಿದಿದ್ದೇವಲ್ಲ, ಅದರ, ಅಂದರೆ ಚರಿತ್ರೆಯ ಪುನರಾವರ್ತನೆಯ ಮೊದಲ ಘಟ್ಟವಿರಬಹುದೆ? ಕಾಲಾನುಕಾಲಕ್ಕೆ ಎಲ್ಲ ಘನವ್ಯಕ್ತಿತ್ವಗಳನ್ನೂ ಹೀಗೆ ಮತ್ತೆ ನಮ್ಮ ನಮ್ಮ ಕಾಲಕ್ಕೆ ಅನುವಾದಿಸಿಕೊಳ್ಳುವ ಪ್ರಯತ್ನವು ನಡೆಯುತ್ತಲೇ ಇರುತ್ತದೆ. ಆದರೆ, ಅದಕ್ಕೊಂದು ಸಾಂಘಿಕ ರೂಪ ಬರುತ್ತಿರುವುದು ಮತ್ತೇನನ್ನಾದರೂ ಸೂಚಿಸುತ್ತಿರಬಹುದೆ? ಇದೊಂದು ಊಹೆಯೂ ಇರಬಹುದು. ನಮ್ಮ ಕಾಲದ ತಲ್ಲಣಗಳ ತೀವ್ರತೆಯನ್ನು ಕಂಡು ಗಾಬರಿಗೊಂಡ ಮನಸ್ಸಿನ ಸಾಂತ್ವನದ ಬಗೆಯೂ ಇರಬಹುದು, ಸುಪ್ತಮನಸ್ಸಿನ ಬಯಕೆಯೂ ಇರಬಹುದು! ಈ ಪ್ರಕ್ರಿಯೆಯಲ್ಲಿ ತೊಡಗಿಕೊಂಡವರಿಗೆ